## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ 202/2021**
**ಸಿಡಬ್ಲು ಃ 4**
**ಪಿಡಬ್ಲು ಃ 3**

**ಹೆಸರು** ಃ ಯಲ್ಲಪ್ಪಾ ದೊಡ್ಡಪ್ಪ ಕೆಂಪಣ್ಣವರ
ವಾಯಸ್ಸು : **63** ವರ್ಷ
**ಉದ್ಯೋಗ** ಃ ನಿವೃತ್ತ ಪಿ ಎಸ್ ಐ
**ವಾಸ** ಃ ಬೆಳಗಾವಿ

**(ದಿನಾಂಕಃ 05-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ ಸಸಅಃರವರಿಂದಃ**

ನಾನು **2012** ರಿಂದ **2015** ರ ವರೆಗೆ ಅಲಾನಿ ದಳ ಗೋಕಾಕನಲ್ಲಿ ಪೋಲಿಸ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿನಾಂಕ **13-02-2013** ರಂದು ಸಾಯಂಕಾಲ ನಾನು ಮತ್ತು ಚಾಸಾ-**5** ಮತ್ತು ಚಾಸಾ-**6** ಕೂಡಿಕೊಂಡು ಪೆಟ್ರೋಲಿಂಗ ಕರ್ತವ್ಯದಲ್ಲಿದ್ದಾಗ , ಕರಗುಪ್ಪಿ ಗ್ರಾಮದಲ್ಲಿ ಬಸ್ಸಾಪೂರ ಜಾರಕಿಹೊಳಿ ರಸ್ತೆ ಮೇಲೆ ಅಲ್ಲಿ ಒಬ್ಬ ವ್ಯಕ್ತಿ ಬಸವಣ್ಣಿ ಬಾಳಪ್ಪ ಗುಟಗುದ್ದಿ ಎಂಬುವವರು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ನಮಗೆ ವಿಷಯ ತಿಳಿದ ಕೂಡಲೇ ಚಾಸಾ-**5** ರವರು ಚಾಸಾ-**1** ರವರಿಗೆ ಫೋನ ಮೂಲಕ ತಿಳಿಸಿದ್ದು , ಅಲ್ಲಿ ಚಾಸಾ-**1** ರವರು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ಚಾಸಾ-**5** ರವರು ಕರೆದುಕೊಂಡು ಬಂದಿರುತ್ತಾರೆ. ಅಲ್ಲಿ ಇಬ್ಬರು ಪಂಚರನ್ನು ಕರೆದುಕೊಂಡು ಅಲ್ಲಿದ್ದಾಗ, ಚಾಸಾ-**1** ರವರು ಅಲ್ಲಿಗೆ ಸಂಜೆ **4-30** ಕ್ಕೆ ಬಂದರು. ಪಂಚರಲ್ಲಿ ಒಬ್ಬರು ಸಂಕೇಶ್ವರದವರು ಮತ್ತು ಮತೊಬ್ಬರು ದಾದಬಾನಹಟ್ಟಿಯವರು . ಪಂಚರಿಗೆ ಬಂದ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದ್ದು ಅವರು ಒಪ್ಪಿದ ನಂತರ ಬಾತ್ಮಿ ಇದ್ದ ಸ್ಥಳಕ್ಕೆ ಸಾಯಂಕಾಲ **5-00** ಕ್ಕೆ ತಲುಪಿದೆವು. ಅಲ್ಲಿ ಬಸ್ಸಾಪೂರ ಜಾರಕಿಹೊಳೆ ರಸ್ತೆಯ ಮೇಲೆ ಮರೆಯಲ್ಲಿ ನಿಂತು ವಾಚ್ ಮಾಡಲಾಗಿ ಅಲ್ಲಿ ಮೂರು-ನಾಲ್ಕು ಜನ ನಿಂತಿದ್ದರು. ಅದರಲ್ಲಿ ಒಬ್ಬ ವ್ಯಕ್ತಿ ಬಿಳಿ ಬಣ್ಣದ ಪ್ಲಾಸ್ಟಿಕ ಕ್ಯಾನಿನಲ್ಲಿ ತನ್ನ ಹತ್ತಿರ ಇದ್ದ ಸಾರಾಯಿಯನ್ನು ಅಲ್ಲಿದ್ದ ಜನರಿಗೆ ಮಾರಾಟ ಮಾಡುತ್ತಿದ್ದ . ನಮಗೆ ಬಂದ

ಬಾತ್ಮಿ ಖಾತ್ರಿಯಾಗಿ ಹಿಡಿಯಲು ಹೋದಾಗ ಅಲ್ಲಿ ಇದ್ದಂತಹ ಎಲ್ಲ ಜನರೂ ಹಾಗೂ ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿ ಹೋದರು. ಬೆನ್ನಟ್ಟಿದರು ಅವರು ಸಿಗಲಿಲ್ಲ . ನಂತರ ಸದರಿ ಸ್ದಳಕ್ಕೆ ವಾಪಸ ಬಂದು ನೋಡಲಾಗಿ ಅಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ ಕ್ಯಾನ ಇದ್ದು ಅದರಲ್ಲಿ 9 ಲೀಟರಿನಷ್ಟು ಕಳ್ಳಭಟ್ಟಿ ಸಾರಾಯಿ ತುಂಬಿತ್ತು. ಅದರ ಕ್ಯಾನನ ಮುಚ್ಚಳ ತೆಗೆದು ನೋಡಲಾಗಿ ಅದನ್ನು ಮೂಸಿಸಿ ನೋಡಲಾಗಿ ಘಾಟು ವಾಸನೆ ಬಂತು . ಆ ಕ್ಯಾನಿನಲ್ಲಿರುವುದು ಕಳ್ಳಬಟ್ಟಿ ಸಾರಾಯಿ ಎಂದು ಖಾತ್ರಿ ಆಯಿತು. ಅದನ್ನು ಚಾಸಾ-1 ರವರು ಪಂಚರ ಸಮಕ್ಷಮ ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಅದರಿಂದ ಮೇಲೆ ಹೇಳಿದ ಮದ್ಯದಿಂದ 180 ಎಂ ಎಲ್ ನಷ್ಟು 1 ಗಾಜಿನ ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದು, ಬಿಳಿ ಬಟ್ಟೆಯಿಂದ ಪ್ಯಾಕಮಾಡಿ ಅದನ್ನು ಅರಗಿನಿಂದ ಶೀಲು ಮಾಡಿ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು. ನಂತರ ಸಿಕ್ಕಂತಹ ಮುದ್ದೆಮಾಲು ತೆಗೆದುಕೊಂಡು ಕಛೇರಿಗೆ ಹೋಗಿ ಸರಕಾರದ ಪರವಾಗಿ ಚಾಸಾ.1ರವರು ಫಿರ್ಯಾದನ್ನು ಸಲ್ಲಿಸಿರುತ್ತಾರೆ. ಮುದ್ದೆಮಾಲನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ಸಾಕ್ಷಿ ನೋಡಿ ಗುರುಸಿರುತ್ತಾರೆ . ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಾನು ಪುನಃ ದಿನಾಂಕ 1-3-2013 ರಂದು ಮರು ಹೇಳಿಕೆ ನೀಡಿರುತ್ತೇನೆ. ಆ ದಿನ ಆರೋಪಿಯು ಠಾಣೆಗೆ ಬಂದಿದ್ದು ನಾನು ಆತನನ್ನು ನೋಡಿ ಗುರುತಿಸಿರುತ್ತೇನೆ.

<u>ಪಾಟಿ ಸವಾಲುಃ ಶ್ರೀಮತಿ ಎಸ್ ಎಸ್ ಎಸ್ ಆರೋಪಿ ಪರ ವಕೀಲರಿಂದ -</u>

ಠಾಣೆ ಬಿಡುವ ಮುಂಚೆ ಬಾತ್ಮಿ ಬಂದ ಪ್ರಕಾರ ಚಾಸಾ-1 ದೂರು ಕೊಟ್ಟಿರಲಿಲ್ಲ ಹಾಗೂ ಎಫ ಐ ಆರ್ ರಜಿಸ್ಟರ ಮಾಡಿರಲಿಲ್ಲ . ಓಡಿ ಹೋದಂತಹ ಜನ ಯಾರು ಎಂದು ವಿಚಾರಣೆ ಮಾಡಿರುವುದಿಲ್ಲ. ಸ್ಥಳಕ್ಕೆ ಹೋಗಿದ್ದೇವೆ ಎಂದು ಹೇಳುವ ಸ್ಥಳದಲ್ಲಿ ಫೋಟೊ ಅಥವಾ ಸ್ಕೇಚ್ ತೆಗೆದಿರುವುದಿಲ್ಲ. ಆ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡಿದಂತಹ ವ್ಯಕ್ತಿಗೆ ಅದರ ಲಿಸ್ಟ ಮಾಡಿ ಅದರ ಪ್ರತಿಯನ್ನು ಏನಾದರೂ ಕೊಟ್ಟಿದ್ದೀರಾ ಎಂದರೆ ಯಾವುದೇ ಲೀಸ್ಟ ಮಾಡಿಲ್ಲ ಎಂದು ಹೇಳುತ್ತಾರೆ. ನಮ್ಮ ಮೇಲಾಧಿಕಾರಿಗಳು ಪ್ರತಿ ತಿಂಗಳು ಸಭೆ ಕರೆಯುತ್ತಾರೆ ಎಂದರೆ ನಿಜ. ಸಭೆಯಲ್ಲಿ ಇಂತಿಷ್ಟು ಪ್ರಕರಣಗಳನ್ನು ಹಾಕಬೇಕೆಂದು ನಿರ್ದೇಶನ

ಕೊಟ್ಟಿರುತ್ತಾರೆ ಎಂದರೆ ಅಕ್ರಮ ಚಟುವಟಿಕೆ ತಡೆಯಲು ನಿರ್ದೇಶನ ಕೊಟ್ಟಿರುತ್ತಾರೆ ಅದಕ್ಕೆ ಕೇಸು ಮಾಡಲು ಹೇಳಿರುತ್ತಾರೆ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾವು ನಮ್ಮ ಮೇಲಾಧಿಕಾರಿಯ ಮಾತು ಕೇಳಿ, ಆತನ ಮೇಲೆ ಒಂದು ಸುಳ್ಳು ಕೇಸು ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**